ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ

# ಮೀನುಕೃಷಿಯ ತಳಿಗಳು




ರಚನೆ:

ಡಾ. ಎಂ. ಆರ್. ರಘುನಾಥ್

ಡಾ. ನಾಗೇಂದ್ರಬಾಬು

ಕುಮಾರಸ್ವಾಮಿ ಆರ್.



ಪ್ರಕಟಣೆ

**ಮೀನುಗಾರಿಕೆ ನಿರ್ದೇಶನಾಲಯ**

ಬೆಂಗಳೂರು–560 001

# ಮೀನುಕೃಷಿಯ ತಳಿಗಳು

ಕರ್ನಾಟಕ ರಾಜ್ಯ ಸುಮಾರು 27000 ಕೆರೆಗಳು, 74 ಜಲಾಶಯಗಳು ಮತ್ತು 5800 ಕಿ.ಮೀ. ಉದ್ದದ ನದಿಪಾತ್ರಗಳಿಂದ ಕೂಡಿರುವ ಸಮೃದ್ಧ ಜಲಸಂಪನ್ಮೂಲಗಳುಳ್ಳ ರಾಜ್ಯ. ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯಿಂದಲೇ 2 ಲಕ್ಷ ಟನ್ ಮೀನು 2011–12ರಲ್ಲಿ ಉತ್ಪಾದಿಸಲಾಗಿದ್ದರೂ ಕೂಡ, ಪ್ರತಿ ಹಳ್ಳಿಯಲ್ಲಿ ಕಂಡುಬರುವ 1ರಿಂದ 4 ಹೆಕ್ಟೇರ್ ವಿಸ್ತೀರ್ಣದ ಕೆರೆಕುಂಟೆಗಳು, ಮಳೆಕೊಯ್ಲು ರಚನೆಗಳನ್ನು ಮೀನಿನ ಉತ್ಪಾದನೆಗೆ ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಜಲಕೃಷಿಯ ಹೊಸ ತಾಂತ್ರಿಕತೆಗಳಿಂದ ಶಾಶ್ವತ ನೀರಿರುವ ಕೆರೆ ಕೊಳಗಳಲ್ಲಷ್ಟೇ ಅಲ್ಲ, ಅಲ್ಪಾವಧಿ ನೀರು ನಿಲ್ಲುವ ಕೆರೆ ಕುಂಟೆಗಳಲ್ಲೂ ಕೂಡ ಲಾಭದಾಯಕ ಜಲಕೃಷಿ ಸಾಧ್ಯ. ಇತ್ತೀಚಿನ ದಿನಗಳಲ್ಲಿ ಮಳೆಯ ಅನಿಶ್ಚತೆಯಿಂದಾಗಿ ಕೃಷಿ ಆಧಾರಿತ ಜೀವನ ದುಸ್ಸಾಧ್ಯವಾಗುತ್ತಿದ್ದು, ಕೃಷಿಯೇತರ ಕಸಬುಗಳನ್ನು ಅವಲಂಬಿಸಿದಾಗ ಜೀವನ ನಿರ್ವಹಣೆ ಸುಲಭಸಾಧ್ಯ. ಮೀನು ಹಿಡಿಯುವುದಕ್ಕಿಂತ ಮೀನು ಬೆಳೆಸಿ ಮಾರಿದಾಗ ಅಧಿಕ ಲಾಭ ಪಡೆಯಬಹುದು. ಮೀನು ಬೆಳೆಸುವುದು ಅಂದರೆ ಜಲಕೃಷಿ ಅಥವಾ ಮೀನು ಮರಿ ಮೇಯಿಸುವುದನ್ನು ರೈತಾಪಿ ಜನರು ಕೆರೆ ಕುಂಟೆಗಳಲ್ಲಿ, ಮಳೆಕೊಯ್ಲು ರಚನೆಗಳಲ್ಲಿ, ಸ್ವಂತ ಕೊಳಗಳಲ್ಲಿ, ತೆರೆದ ಬಾವಿ ಮುಂತಾದ ಹಲವಾರು ಜಲಸಂಗ್ರಹಣ ರಚನೆಗಳಲ್ಲಿ ಮಾಡಬಹುದು. ವೈಜ್ಞಾನಿಕ ವಿಧಾನದಲ್ಲಿ ಜಲಕೃಷಿ ಮಾಡಿದಾಗ ಒಂದು ಎಕರೆಯಲ್ಲಿ ಒಂದು ವರ್ಷಕ್ಕೆ ಸುಮಾರು 2500 ರಿಂದ 3000 ಕೆ.ಜಿ. ಮೀನನ್ನು ಉತ್ಪಾದಿಸಬಹುದು. ಇದರಿಂದ ಗ್ರಾಮೀಣ ಜನತೆಯ ಪೌಷ್ಟಿಕ ಆಹಾರದ ಕೊರತೆ, ನಿರುದ್ಯೋಗದ ಸಮಸ್ಯೆಗಳನ್ನು ನಿವಾರಿಸಬಹುದಲ್ಲದೆ, ಜನರ ಜೀವನಮಟ್ಟವನ್ನೂ ಕೂಡ ಉತ್ತಮಪಡಿಸಬಹುದು.

## ಜಲಕೃಷಿಗೆ ಸೂಕ್ತ ಜಲ, ನೆಲ

ಐದರಿಂದ ಆರು ಅಡಿ ಆಳವಿದ್ದು, ತಳದ ಮಣ್ಣು ಜೇಡಿಮಣ್ಣಿನಿಂದ ಕೂಡಿ, ನೀರು ಬಸಿದು ಹೋಗದಂತಿರುವ ಜಲಸಂಗ್ರಹಣೆಯ ರಚನೆಗಳು ಜಲಕೃಷಿಗೆ ಉತ್ತಮ. ಕೇವಲ ಮೀನು ಮರಿಪಾಲನೆ ಮಾತ್ರ ಮಾಡುವುದಿದ್ದರೆ, ನೀರಿನ ಆಳ ನಾಲ್ಕು ಅಡಿ ಕೂಡ ಸಾಕಾಗುತ್ತದೆ. ಸ್ವಂತ ಕೊಳಗಳನ್ನು ನಿರ್ಮಿಸಿದಾಗ ಕೊಳ ಆಯತಾಕಾರವಾಗಿದ್ದು, ಕನಿಷ್ಟ ಕಾಲು ಎಕರೆಯಾದರೂ ಇರಬೇಕು. ಐದು ಎಕರೆಗಿಂತ ದೊಡ್ಡದಾದ ಸ್ವಂತ ಕೊಳಗಳ ನಿರ್ವಹಣೆ ಕಷ್ಟಸಾಧ್ಯ. ಕೊಳ ಅಥವಾ ಜಲಸಂಗ್ರಹಣ ರಚನೆಯ ಬದುಗಳ ಇಳಿಜಾರನ್ನು ಮಣ್ಣಿನ ಗುಣಧರ್ಮವನ್ನು ಅನುಸರಿಸಿ ಹೆಚ್ಚು ಜೇಡಿ ಮಣ್ಣು ಇದ್ದಾಗ ಕಡಿಮೆ ಇಳಿಜಾರು (1:1.5 ರಿಂದ 2) ಮತ್ತು ಜೇಡಿ ಮಣ್ಣು ಕಡಿಮೆಯಿದ್ದಾಗ ಜಾಸ್ತಿ ಇಳಿಜಾರು ಕಲ್ಪಿಸಿ (1:2 ರಿಂದ 3.5) ನಿರ್ಮಿಸಬೇಕು. ಮಣ್ಣಿನ ರಸಸಾರ 6–8.5, ಜೇಡಿ ಅಂಶ 20–30%, ಕ್ಷಾರತೆ 80–100 ಪಿ.ಪಿ.ಎಮ್., ಮತ್ತು ಇ.ಸಿ. 0.4 ಮಿಲಿಮೋಸಿಗಿಂತ ಕಡಿಮೆ ಇರುವುದು ಒಳ್ಳೆಯದು. ಮಣ್ಣಿನ ರಸಸಾರ, ಸಾವಯುವ ಇಂಗಾಲ, ಸಾರಜನಕ, ರಂಜಕದ ಪ್ರಮಾಣಗಳು ಕಡಿಮೆ ಇದ್ದರೂ ಸೂಕ್ತ. ಗೊಬ್ಬರಗಳ ಮೂಲಕ ಅದನ್ನು ಸರಿಮಾಡಿಕೊಳ್ಳಬಹುದು. ಕೆರೆಕುಂಟೆ, ಜಲಸಂಗ್ರಹಣ ರಚನೆಗಳಲ್ಲದೆ, ಸ್ವಂತ ಕೊಳ ಕಟ್ಟಿದಾಗ, ಕಾಲುವೆ, ಹೆಚ್ಚು ಇಳುವರಿ ಇರುವ ಕೊಳವೆ ಬಾವಿ ಮುಂತಾದ ನಂಬಲರ್ಹವಾದ ನೀರಿನಾಶ್ರಯ ಬಹು ಮುಖ್ಯ. ಜಲಕೃಷಿಗೆ ತಕ್ಕದಾದ ನೀರು 7–8.5 ರಸಸಾರ, 100–160 ಪಿ.ಪಿ.ಎಮ್. ಕ್ಷಾರತೆ, 40–200 ಪಿ.ಪಿ.ಎಮ್. ಗಡಸುತನ ಹೊಂದಿದ್ದು, 18 ರಿಂದ 35 ಸೆ. ಉಷ್ಣಾಂಶ, 5–9 ಪಿ.ಪಿ.ಎಮ್ ಆಮ್ಲಜನಕ, 0.25 ಪಿ.ಪಿ.ಎಮ್.ಗಿಂತ ಕಮ್ಮಿ ಅಮೋನಿಯಾ ಹಾಗೂ 0.02 ಪಿ.ಪಿ.ಎಮ್.ಗಿಂತಲೂ ಕಮ್ಮಿ ಜಲಜನಕದ ಸಲ್ಫೈಡ್ ಹೊಂದಿರುತ್ತದೆ. ನಗರಗಳಿಂದ ಹೊರಬರುವ ತ್ಯಾಜ್ಯ ನೀರನ್ನೂ ಕೂಡ ಈ ಗುಣಧರ್ಮ ಹೊಂದಿದ್ದಲ್ಲಿ ಮೀನುಕೃಷಿಗೆ ಉಪಯೋಗಿಸಬಹುದು. ತ್ಯಾಜ್ಯ ನೀರನ್ನು ಸೂಕ್ತ ಉಪಚಾರಕ್ಕೆ ಒಳಪಡಿಸಿ, ಜಲಕೃಷಿಯನ್ನು ಕಲ್ಕತ್ತ ನಗರದ ಹೊರಭಾಗದಲ್ಲಿರುವ ರೈತರು ಅನೇಕ ವರ್ಷಗಳಿಂದ ಯಶಸ್ವಿಯಾಗಿ ಮಾಡುತ್ತಿದ್ದಾರೆ.

## ಜಲಕೃಷಿಗೆ ಕೆರೆ, ಕುಂಟೆ, ಕೊಳಗಳ ಸಿದ್ದತೆ

ಮೀನು ಮರಿಗಳನ್ನು ಬಿಡುವ ಮುನ್ನ ಮಣ್ಣಿನ ರಸಸಾರ 6.5ಕ್ಕಿಂತ ಕಮ್ಮಿ ಇದ್ದರೆ ಎಕರೆ ಒಂದಕ್ಕೆ 200–250 ಕೆ.ಜಿ. ಸುಟ್ಟ ಸುಣ್ಣವನ್ನು ಎಲ್ಲಾ ಕಡೆ ಸಮನಾಗಿ ಹರಡಿ ರಸಸಾರವನ್ನು ಸರಿಪಡಿಸಬೇಕು. ಬೇಸಿಗೆಯಲ್ಲಿ ಪೂರ್ಣವಾಗಿ ಬತ್ತಿಹೋಗುವ ಕೆರೆ ಕುಂಟೆಗಳಲ್ಲಿ ಜಲಸಸ್ಯಗಳು ಮತ್ತು ಕಳೆ ಮೀನುಗಳ ತೊಂದರೆ ಇರುವುದಿಲ್ಲ. ಇಂತಹ ಸ್ಥಳಗಳಲ್ಲಿ ಕೊಳದ ತಳವನ್ನು ಒಮ್ಮೆ ಉಳುವುದರಿಂದ ಕಳೆಗಳು ಹೋಗಿ, ಮಣ್ಣಿನ ಫಲವತ್ತತೆ ಹೆಚ್ಚಿ ಮುಂದಿನ ಬೆಳೆಗೆ ಸಹಾಯಕವಾಗುತ್ತದೆ. ಯಾವಾಗಲೂ ನೀರು ನಿಂತಿರುವ ಕೆರೆ ಕುಂಟೆಗಳಲ್ಲಿ ನೀರಿನಂಚಿನಲ್ಲಿರುವ ಕಳೆಗಳನ್ನು ಕಿತ್ತು ಅಥವಾ ಎಚ್ಚರಿಕೆಯಿಂದ ಕಳೆನಾಶಕಗಳನ್ನು ಉಪಯೋಗಿಸಿ ಹತೋಟಿಗೆ ತರಬೇಕು. ನೀರಿನಲ್ಲಿರುವ ಕಳೆಮೀನುಗಳು, ಕಪ್ಪೆ, ಹಾವು ಇತ್ಯಾದಿ ಪ್ರಾಣಿಗಳನ್ನು ಎಳೆಬಲೆಯ ಸಹಾಯದಿಂದ ಅಥವಾ ಆಳ ನೀರಿರುವ ಕೆರೆಗಳಲ್ಲಿ ಎಕರೆಗೆ 1000 ಕೆ.ಜಿ. ಹಿಪ್ಪೆ ಅಥವಾ ಬೇವಿನ ಹಿಂಡಿಯನ್ನು ಹಾಕಿ ನಿರ್ಮೂಲನೆ ಮಾಡಬೇಕು. ಮೀನು ಮರಿಗಳಿಗೆ ಅಗತ್ಯವಿರುವ ನೈಸರ್ಗಿಕ ಆಹಾರ ಜಲಕೃಷಿಯಲ್ಲಿ ಸಾಕಾಗುವುದಿಲ್ಲ. ಆದ್ದರಿಂದ ಸರಿಯಾದ ಪ್ರಮಾಣದಲ್ಲಿ ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳನ್ನು ಮರಿ ಬಿಡುವ 10–15 ದಿನಗಳ ಮುಂಚೆ ಹಾಕುವುದು ಆವಶ್ಯಕ. ಜಲಕೃಷಿಗೆ ಹಾಕಬೇಕಾದ ಗೊಬ್ಬರಗಳ ಪ್ರಮಾಣ ಹೀಗಿದೆ:

ಗೊಬ್ಬರ ಹಾಕಿದ 10–15 ದಿನಗಳ ನಂತರ ನೀರಿನ ಬಣ್ಣ ತಿಳಿಹಸಿರಾಗುತ್ತದೆ, ಆಗ ಮರಿಗಳನ್ನು ಬಿಡಲು ಸಕಾಲ.

| | ಪ್ರತಿ ಎಕರೆಗೆ |
|---|---|
| ಮೊದಲನೆಯ ಸಲ | ಹಸಿ ಸಗಣಿ 3000 ಕೆ.ಜಿ., ಸಿಗದಿದ್ದರೆ ಕೋಳಿಗೊಬ್ಬರ 1500 ಕೆ.ಜಿ. |
| ನಂತರ ಪ್ರತಿ ತಿಂಗಳು | ಹಸಿ ಸಗಣಿ 500 ಕೆ.ಜಿ., ಸಿಗದಿದ್ದರೆ ಕೋಳಿಗೊಬ್ಬರ 250 ಕೆ.ಜಿ. ಜೊತೆಗೆ 10 ಕೆ.ಜಿ. ಸಿಂಗಲ್ ಸೂಪರ್ ಫಾಸ್ಫೇಟ್ ಮತ್ತು 5 ಕೆ.ಜಿ. ಯೂರಿಯಾ |

## ಮರಿಗಳ ಬಿತ್ತನೆ

ಕೆರೆ ಕೊಳಗಳಲ್ಲಿ ಬಿಡುವ ಮೀನಿನ ಮರಿಗಳು 3.5 ರಿಂದ 4 ಸೆ.ಮೀ. ಉದ್ದವಾದರೂ ಇರಬೇಕು. 5ರಿಂದ 6 ತಿಂಗಳು ಮಾತ್ರ ನೀರು ನಿಲ್ಲುವ ಅಲ್ಪಾವಧಿಯ ಕೆರೆ ಕುಂಟೆಗಳಲ್ಲಿ ಬಿಡುವುದಾದರೆ ಈ ಗಾತ್ರದ ಮರಿಗಳು ಸಾಕಾಗುವುದಿಲ್ಲ. ಇಂತಹ ಕೆರೆ ಕುಂಟೆಗಳಿಗೆ ದೊಡ್ಡ ಗಾತ್ರದ ಅಂದರೆ 6 ರಿಂದ 8 ಸೆ.ಮೀ. ಉದ್ದವಿರುವ ಮರಿಗಳನ್ನು ಬಿಡಬೇಕು. ಪ್ರತಿ ಎಕರೆಗೆ ಬಿತ್ತನೆ ಮಾಡಬೇಕಾದ ಮರಿಗಳ ಸಂಖ್ಯೆ ನೀರಿನ ಸ್ವಾಭಾವಿಕ ಫಲವತ್ತತೆ, ನಾವು ಹಾಕುವ ಗೊಬ್ಬರ ಮತ್ತು ಆಹಾರದ ಪ್ರಮಾಣ ಮತ್ತು ಜಲಕೃಷಿಯ ತೀವ್ರತೆ (ಇಂಟೆನ್ಸಿಟಿ) ಇವುಗಳನ್ನು ಅವಲಂಬಿಸಿರುತ್ತದೆ.

| ತಳಿಗಳು | ಬಿಡಬೇಕಾದ ಅನುಪಾತ |
|---|---|
| 1. ಕಾಟ್ಲಾ:ರೋಹು:ಮೃಗಾಲ್ | 2:4:4 |
| 2. ಕಾಟ್ಲಾ:ರೋಹು:ಮೃಗಾಲ್:ಸಾಮಾನ್ಯ ಗೆಂಡೆ | 3:4:1:2 |
| 3. ಕಾಟ್ಲಾ:ರೋಹು:ಮೃಗಾಲ್:ಬೆಳ್ಳಿಗೆಂಡೆ: | 1:2:2:2:1.5:1.5 |
| ಹುಲ್ಲುಗೆಂಡೆ:ಸಾಮಾನ್ಯಗೆಂಡೆ | |
| 4. ಕಾಟ್ಲಾ:ರೋಹು:ಮೃಗಾಲ್ | 2:2:2:1:2 |
| ಭಾರತೀಯ ಆನೆ ಮೀನು | |

ಬಿತ್ತನೆಗೆಂದು ಮರಿ ಸರಬರಾಜು ಕೇಂದ್ರಗಳಿಂದ ಮರಿಗಳನ್ನು ತರುವಾಗ, ಅವನ್ನು ಮುಂಚೆಯೇ ಸ್ವಚ್ಛ ನೀರಿನಲ್ಲಿ 2–4 ಗಂಟೆಗಳ ಕಾಲ ಇಟ್ಟಿದ್ದಾರೆ ಎಂದು ಖಾತ್ರಿ ಮಾಡಿ ಕೊಳ್ಳಬೇಕು. ಇಲ್ಲವಾದರೆ ಮರಿಗಳು ದಾರಿಯಲ್ಲಿಯೇ ಅಥವಾ ಬಿಟ್ಟ ತಕ್ಷಣ ಸಾಯುವ ಸಂಭವವಿರುತ್ತದೆ. ಮರಿಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿದಾಗ ಮರಿಗಳ ಗಾತ್ರ ಅನುಸರಿಸಿ ಪ್ಯಾಕ್ ಮಾಡಬೇಕು. ಕೋಷ್ಟಕ ನೋಡಿ

**12 ಗಂಟೆಗಳ ಪ್ರಯಾಣಕ್ಕೆ, 16–18 ಲೀ. ಪ್ಲಾಸ್ಟಿಕ್ ಚೀಲದಲ್ಲಿ ಪ್ಯಾಕ್ ಮಾಡಬಹುದಾದ ಮರಿಗಳ ಸಂಖ್ಯೆ**

| ಗಾತ್ರ, ಸೆ.ಮೀ. | ಹಾಕಬಹುದಾದ ಮರಿಗಳ ಸಂಖ್ಯೆ |
|---|---|
| 1 | 1000–1500 |
| 2 | 500–5000 |
| 3 | 200–1000 |
| 4 | 200–500 |
| 5 | 75–300 |
| 7 | 25–100 |
| 8 | 25–50 |

ಮರಿಗಳನ್ನು ಕೊಂಡೊಯ್ಯಬೇಕಾದ ದೂರ ಹೆಚ್ಚಿರದಿದ್ದರೆ ಮೇಲ್ಕಂಡ ಮರಿಗಳ ಸಂಖ್ಯೆ ಹೆಚ್ಚಿಸಬಹುದು. ಎಲ್ಲಾ ಸಂದರ್ಭಗಳಲ್ಲೂ ಚೀಲದಲ್ಲಿ ಆಮ್ಲಜನಕ ತುಂಬಿಸಿ ಕೊಂಡೊಯ್ಯಿರಿ. ಮರಿಗಳನ್ನು ಕೊಳ, ಕೆರೆ, ಕುಂಟೆಗಳಿಗೆ ಬಿಡಲು ಬೆಳಿಗ್ಗೆ ಅಥವಾ ಸಂಜೆ ಸೂಕ್ತ ಕಾಲ. ಬಿಡುವ ಮುನ್ನ ಕಟ್ಟಿದ ಚೀಲಗಳನ್ನು ಅರ್ಧದಿಂದ ಒಂದು ಗಂಟೆ ನೀರಿನಲ್ಲೇ ತೇಲಬಿಟ್ಟದ್ದು, ನಂತರ ಹಂತ ಹಂತವಾಗಿ ಕೊಳದ ನೀರನ್ನು ಚೀಲದೊಳಗೆ ಬಿಟ್ಟು ಮರಿಗಳು ಚೆನ್ನಾಗಿವೆ ಎಂದು ಖಾತ್ರಿಯಾದ ಮೇಲೆ ಮರಿಗಳನ್ನು ಕೊಳಕ್ಕೆ ಬಿಡತಕ್ಕದ್ದು.

| ಜಲ ಸಂಪನ್ಮೂಲಗಳು | ಬಿತ್ತಬೇಕಾದ ಮರಿಗಳ ಸಂಖ್ಯೆ, (ಪ್ರತಿ ಎಕರೆಗೆ) |
|---|---|
| ಅಲ್ಪಾವಧಿಯ ನೈಸರ್ಗಿಕ ಕೆರೆ ಕುಂಟೆಗಳು | 600–700 (6–8 ಸೆ.ಮೀ. ಗಾತ್ರ) |
| ಮಳೆಕುಯ್ಲು ರಚನೆಗಳು (8 ತಿಂಗಳು) | 2000 (6–8 ಸೆ.ಮೀ. ಗಾತ್ರ) |
| 8 ತಿಂಗಳು ಮೇಲ್ಪಟ್ಟು ನೀರು ಇರುವ ಜಲ ಸಂಪನ್ಮೂಲ | 2000 (ಅಥವಾ 4000 ಪೂರಕ ಆಹಾರ ಕೊಡುವುದಾದರೆ) |
| ಸ್ವಂತ ಕೊಳಗಳಲ್ಲಿ (ವರ್ಷ ಪೂರ್ತಿನೀರು ಇರುವ) | 4000–6000 (4–6 ಸೆ.ಮೀ. ಗಾತ್ರ, ಪೂರಕ ಆಹಾರದ ಜೊತೆಗೆ) |

## ಪೂರಕ ಆಹಾರ ನೀಡುವಿಕೆ


ಕೇವಲ ಗೊಬ್ಬರಗಳನ್ನು ಹಾಕುವುದರಿಂದಲೇ ಜಲಕೃಷಿಯಲ್ಲಿ ಪ್ರತಿ ಎಕರೆಗೆ 800ರಿಂದ 1000 ಕೆ.ಜಿ. ಮೀನು ಇಳುವರಿ ಪಡೆಯಲು ಸಾಧ್ಯ. ಆದರೆ ಮೇಲು ಅಥವಾ ಪೂರಕ ಆಹಾರವನ್ನು ಕೊಡುವುದರಿಂದ ಇನ್ನೂ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ. ಪೂರಕ ಆಹಾರವೆಂದರೆ ಸಾಮಾನ್ಯವಾಗಿ ಅಕ್ಕಿ ಪಾಲಿಷ್ ತೌಡು ಮತ್ತು ಕಡಲೆಕಾಯಿ ಹಿಂಡಿಯನ್ನು ಸಮಪ್ರಮಾಣದಲ್ಲಿ ಬೆರೆಸಿ ಬಿಸಿನೀರಿನಲ್ಲಿ ಕಲಸಿ ಮುದ್ದೆ ಮಾಡಿ ಹಾಕುವುದು. ಅಕ್ಕಿಪಾಲಿಷಿನ ಬದಲಾಗಿ ಜೋಳದಹಿಟ್ಟು, ಗೋಧಿಬೂಸಾ, ರಾಗಿ ಹಿಟ್ಟು ಮುಂತಾದ ಪಿಷ್ಟಪ್ರಧಾನ ಪದಾರ್ಥಗಳನ್ನು ಕೂಡ ಕೊಡಬಹುದು. ಅದೇ ರೀತಿ ಕಡಲೆಕಾಯಿ ಹಿಂಡಿಗೆ ಬದಲಾಗಿ ಸೋಯಾ ಹಿಂಡಿ, ಸೂರ್ಯಕಾಂತಿ, ಹತ್ತಿ, ತೆಂಗು ಮುಂತಾದ ಖಾದ್ಯ/ಎಣ್ಣೆಬೀಜಗಳ ಹಿಂಡಿಯನ್ನು ಕೂಡ ಕೊಡಬಹುದು. ಆಯಾ ಪ್ರದೇಶಗಳಲ್ಲಿ ಸಿಗುವ ಕಮ್ಮಿ ಬೆಲೆಯ ಮೇವಿನ ಪದಾರ್ಥಗಳನ್ನು ಉಪಯೋಗಿಸಿಕೊಂಡು, ಮೇವಿನ ಖರ್ಚನ್ನು ಕಡಿಮೆ ಮಾಡಬಹುದು. ಮರಿಗಳು ಬೆಳೆದು ದೊಡ್ಡವಾದಂತೆ ಮೇವಿನ ಪ್ರಮಾಣವನ್ನು ಹೆಚ್ಚಿಸಬೇಕು. ಇದನ್ನು ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

| ಅವಧಿ | ಮೇವಿನ ಪ್ರಮಾಣ (ದಿನವಹಿ, ಕೆ.ಜಿ.) |
|---|---|
| 1– 90 ದಿನಗಳವರೆಗೆ | 0.8 |
| 91ರಿಂದ 180 ದಿನಗಳವರೆಗೆ | 1.6 |
| 181ರಿಂದ 270 ದಿನಗಳವರೆಗೆ | 3.2 |
| 271ರಿಂದ 330 ದಿನಗಳವರೆಗೆ | 6.4 |

**4000 ಮರಿಗಳನ್ನು ಒಂದು ಎಕರೆ ಜಲಪ್ರದೇಶದಲ್ಲಿ ಬಿಟ್ಟಾಗ ಕೊಡಬೇಕಾದ ಆಹಾರದ ಪ್ರಮಾಣ**

ಮೇವನ್ನು ಒಂದೇ ಸಲ ಕೊಡುವುದಕ್ಕಿಂತ ಎರಡುಭಾಗಗಳನ್ನಾಗಿ ಮಾಡಿ ಬೆಳಿಗ್ಗೆ ಮತ್ತು ಸಂಜೆ ಕೊಡುವುದು ಉತ್ತಮ. ಕೆರೆ, ಕೊಳಗಳಿಗೆ ಹುಲ್ಲು ಗೆಂಡೆ ಬಿತ್ತನೆ ಮಾಡಿದ್ದರೆ ಮೊದಲು ಹುಲ್ಲು, ಬಾಳೆ ಎಲೆ ಇತ್ಯಾದಿ ಮೇವನ್ನು ಸಣ್ಣ ಸಣ್ಣದಾಗಿ ಕತ್ತರಿಸಿ ಹಾಕಿ ಒಂದು ಗಂಟೆಯ ನಂತರ ಪೂರಕ ಆಹಾರವನ್ನು ಕೊಡಿ. ಮೇವನ್ನು ಕೊಡುವಾಗ ಕೊಳದ ನಾಲ್ಕಾರು ಕಡೆಗಳಲ್ಲಿ ಭಾರಕಟ್ಟಿದ ಪ್ಲಾಸ್ಟಿಕ್ಕಿನ ತಟ್ಟೆಗಳಲ್ಲಿ ಹಾಕಿದರೆ, ಮಾರನೆಯ ದಿನ ಉಳಿದ ಮೇವಿನ ಪ್ರಮಾಣ ನೋಡಿಕೊಂಡು ಕೊಡುವ ಮೇವನ್ನು ಜಾಸ್ತಿ ಅಥವಾ ಕಡಿಮೆ ಮಾಡಬಹುದು. ಪ್ಲಾಸ್ಟಿಕ್ಕಿನ ತಟ್ಟೆಗಳನ್ನು ಆಗಾಗ್ಗೆ ಉಜ್ಜಿ, ಸ್ವಚ್ಛವಾಗಿ ಇಟ್ಟುಕೊಳ್ಳಬೇಕು.

ಕೆಳಗೆ ಮೀನಿನ ತಳಿಗಳ ಚಿತ್ರ, ವಾಸದ ಸ್ವಭಾವ, ಬೆಳವಣಿಗೆಯ ಅವಧಿ ಮತ್ತು ಬೆಳೆದ ಮೀನಿನ ಗಾತ್ರವನ್ನು ಕೊಟ್ಟಿದೆ.

| | |
|---|---|
| ಕಾಟ್ಲಾ: ನೀರಿನ ಮೇಲ್ಭಾಗದಲ್ಲಿ ವಾಸಿಸುವ ಈ ಮೀನು ಒಂದು ವರ್ಷದಲ್ಲಿ 1.0 ಕೆ.ಜಿ.ಯ ತನಕ ಬೆಳೆಯಬಲ್ಲುದು.  | ಸಾಮಾನ್ಯ ಗೆಂಡೆ: ನೀರಿನ ತಳಭಾಗದಲ್ಲಿ ವಾಸಿಸುವ ಈ ಮೀನು ಒಂದು ವರ್ಷದಲ್ಲಿ ಒಂದು ಕೆ.ಜಿ.ಯ ತನಕ ಬೆಳೆಯಬಲ್ಲದು.  |
| ರೋಹು: ನೀರಿನ ಮಧ್ಯಭಾಗದಲ್ಲಿ ವಾಸಿಸುವ ಈ ಮೀನು ಒಂದು ವರ್ಷದಲ್ಲಿ ಮುಕ್ಕಾಲು ಕೆ.ಜಿ.ಯ ತನಕ ಬೆಳೆಯ ಬಲ್ಲುದು.  | ಬೆಳ್ಳಿ ಗೆಂಡೆ: ನೀರಿನ ಮೇಲ್ಭಾಗದಲ್ಲಿ ವಾಸಿಸುವ ಈ ಮೀನು ಒಂದು ವರ್ಷದಲ್ಲಿ ಎರಡು ಕೆ.ಜಿ.ಯ ತನಕ ಬೆಳೆಯಬಲ್ಲದು.  |
| ಮೃಗಾಲ್:ನೀರಿನ ತಳಭಾಗದಲ್ಲಿ ವಾಸಿಸುವ ಈ ಮೀನು ಒಂದು ವರ್ಷದಲ್ಲಿ ಮುಕ್ಕಾಲು ಕೆ.ಜಿ.ಯ ತನಕ ಬೆಳೆಯಬಲ್ಲುದು.  | ಹುಲ್ಲುಗೆಂಡೆ: ನೀರಿನಲ್ಲಿ ಬೆಳೆಯುವ ಸಸ್ಯಗಳನ್ನು ತಿನ್ನುವ ಈ ಮೀನು ವರ್ಷದಲ್ಲಿ ಎರಡು ಕೆ.ಜಿ. ತನಕ ಬೆಳೆಯಬಲ್ಲುದು. ಕೆರೆ, ಕೊಳಗಳಲ್ಲಿ ಸಸ್ಯಗಳ ಹತೋಟಿಗೆ ಇದು ಬಲು ಉಪಯುಕ್ತ.  |

## ಮೀನು ಶಿಕಾರಿಯ ವಿಧಾನಗಳು

**ಬಿಡುಬಲೆ:** ಕೆರೆ ಕುಂಟೆಗಳಲ್ಲಿ ಸಾಮಾನ್ಯವಾಗಿ ಬಿಡುಬಲೆಯನ್ನು ಉಪಯೋಗಿಸಿ ಮೀನು ಹಿಡಿಯುತ್ತಾರೆ. ಮಿಶ್ರ ಮೀನು ಪಾಲನೆಯಲ್ಲಿ ವಿವಿಧ ತಳಿಯ ಮೀನುಗಳು ಬೇರೆ ಬೇರೆ ಗಾತ್ರಕ್ಕೆ ಬೆಳೆದಿರುತ್ತವೆ. ಅದಲ್ಲದೆ ಒಂದೇ ತಳಿಯ ಮೀನುಗಳೂ ಕೂಡ ಬೇರೆಬೇರೆ ಗಾತ್ರಕ್ಕೆ ಬೆಳೆಯುವುದು ಸಾಮಾನ್ಯ. ಆದ್ದರಿಂದ ಒಂದೇ ಗಾತ್ರಕ್ಕೆ ಬೆಳೆದಿರುವ ಮೀನುಗಳನ್ನು ಬಿಡುಬಲೆ ಉಪಯೋಗಿಸಿ ಹಿಡಿಯಬೇಕು. ಇದರಿಂದ ಸಣ್ಣ ಗಾತ್ರದ ಮೀನುಗಳು ದೊಡ್ಡವಾಗಿ ಬೆಳೆಯಲು ಅನುಕೂಲವಾಗುತ್ತದೆ.

**ಎಳೆಬಲೆ:** ಕೊಳದ ಆಳ 3 ಅಡಿಗಳಿಗಿಂತ ಕಡಿಮೆಯಾದಾಗ ಈ ಬಲೆಯನ್ನು ಉಪಯೋಗಿಸುವುದು ಸೂಕ್ತ. ಇಲ್ಲಿ ಕೂಡ ಮೀನು ಹಿಡಿದಾಗ ಒಂದೇ ಗಾತ್ರದ ಮೀನುಗಳನ್ನು ಮಾತ್ರ ಹಿಡಿದು ಚಿಕ್ಕ ಮೀನುಗಳನ್ನು ಇನ್ನೂ ಬೆಳೆಯಲು ಬಿಡಬೇಕು.

**ಬೀಸುಬಲೆ:** ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಮೀನು ಹಿಡಿದು ಮಾರಾಟ ಮಾಡಬೇಕಾದಾಗ ಈ ಬಲೆ ಹೆಚ್ಚು ಉಪಯುಕ್ತ.

ಮೀನನ್ನು ಹಿಡಿದು ಮಾರಾಟಮಾಡುವಾಗ ಸ್ಥಳೀಯ ಹಾಗೂ ಹೊರಗಿನ ಬೇಡಿಕೆ ಮತ್ತು ಹಿಡಿಯುವಿಕೆಯ ಖರ್ಚು ನೋಡಿಕೊಂಡು ಎಷ್ಟು ಬಾರಿ ಹಿಡಿಯಬೇಕೆಂದು ನಿರ್ಧರಿಸಿ. ಕೊಳದಲ್ಲಿರುವ ಮೀನು ಬೆಳೆದು ದೊಡ್ಡದಾದರೂ, ಬಲಿತು ಅದರ ಸ್ವಾದಿಷ್ಟತೆ ಕಡಿಮೆಯಾಗದಿರುವುದು ಮೀನುಕೃಷಿಯ ಹೆಗ್ಗಳಿಕೆ.

## ಮೀನುಕೃಷಿಯ ಆರ್ಥಿಕತೆ (ಒಂದು ಎಕರೆಗೆ)

**ಬಂಡವಾಳ ವೆಚ್ಚ (ರೂ. ಗಳಲ್ಲಿ)**

| | | |
|---|---|---|
| 1. ಕೊಳ ನಿರ್ಮಾಣದ ವೆಚ್ಚ (ಸ್ವಂತ ಕೊಳ ಅಥವಾ ಮಳೆಕೊಯ್ಲು ರಚನೆ ನಿರ್ಮಿಸಿದ್ದರೆ) (ಎಕರೆ ವಿಸ್ತೀರ್ಣದ ಜಲಪ್ರದೇಶಕ್ಕೆ) | 1,60,000 | |
| 2. ಇತರೆ | 10,000 | |
| ಒಟ್ಟು | 1,70,000 | |
| | 64,000 | (NMPS subsidy ಮೊತ್ತ ರೂ.64,000 ಕಳೆದು) |
| | **1,06,000** | |

**ಬೆಳೆಗೆ ತಗಲುವ ವೆಚ್ಚ (ರೂ. ಗಳಲ್ಲಿ) (ನಿರ್ವಹಣಾ ವೆಚ್ಚ)**

| | |
|---|---|
| 1. ಕೊಳದ ಸ್ವಚ್ಛತೆಗೆ | 10,000 |
| 2. ಮೀನುಮರಿಗಳ ಬೆಲೆ | 4,000 |
| 3. ಪೂರಕ ಆಹಾರ | 60,000 |
| 4. ಇತರೆ ಖರ್ಚು (ಕೂಲಿ, ಕಾವಲು ಇತ್ಯಾದಿ) | 20,000 |
| 5. ಬಂಡವಾಳದ ಮೇಲಿನ ಸಾಲ ಮತ್ತು ಬಡ್ಡಿ ಮರುಪಾವತಿ (ಪ್ರತಿ ವರ್ಷ 5 ವರ್ಷಗಳಿಗೆ) | 21,000 |
| **ಒಟ್ಟು** | **1,15,000** |

**ಆದಾಯ (ರೂ. ಗಳಲ್ಲಿ)**

| | |
|---|---|
| 1. ನಿರೀಕ್ಷಿತ ವಾರ್ಷಿಕ ಉತ್ಪನ್ನ | 2,000 ಕೆ.ಜಿ. |
| 2. ಪ್ರತಿ ಕೆ.ಜಿ.ಗೆ ರೂ. 80ರಂತೆ ಮಾರಿದ್ದರಿಂದ ಬರುವ ಆದಾಯ | 1,60,000 |
| ನಿವ್ವಳ ಅದಾಯ | 45,000 |

**ಹೆಚ್ಚಿನ ಮಾಹಿತಿಗಾಗಿ** ನಿಮ್ಮ ಸಮೀಪದ ಮೀನುಗಾರಿಕೆ ಕಛೇರಿಯನ್ನು ಅಥವಾ ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು –56001 ದೂರವಾಣಿ ಸಂಖ್ಯೆ: 080–22864681, ಫ್ಯಾಕ್ಸ್: 080–22884017, ಇ–ಮೇಲ್: dof-blr-ka@nic.in ವೆಬ್ ಸೈಟ್:

www.fisheries.karnataka.gov.in